ನಿಜವಾಗಿಯೂ ಮಣ್ಣಿನ ಮಕ್ಕಳು ನಾವು. ಅದಕೆಂದೇ ಜಾನಪದ ತತ್ವಪದಕಾರರು ಮಾನವ ದೇಹವನ್ನು ಮಣ್ಣಿನ ಕೊಡಕ್ಕೆ ಹೋಲಿಸುವುದು. ಒಂಬತ್ತು ತೂತಿನ ಕೊಡ ಅನ್ನುವುದು. ಆಗಲೇ ಹೇಳಿದಂತೆ, 'ಘಟ' ಎಂದರೆ ಅದು ಮಾನವ ದೇಹದ ಇನ್ನೊಂದು ಹೆಸರು ಕೂಡ ಹೌದು. ಮಣ್ಣಿನ ಕೊಡ ಬಿದ್ದು ಒಡೆದು ಹೋಗುವುದೆಂದರೆ, ದೇಹಕ್ಕೆ ಸಾವು ಒದಗಿದಂತೆಯೇ ನಶ್ವರ. ಅದಕೆಂದೇ, ಮಣ್ಣಿನ ಘಟಕ್ಕೂ ಮಾನವ ಶರೀರಕ್ಕೂ ಅವಿನಾಭಾವ ಸಂಬಂಧ ಕಲ್ಪಿಸಿದ್ದಾರೆ ತತ್ವಪದಕಾರರು. ಮನುಜ ಶರೀರವನ್ನು 'ಒಂದು ದಿನ ಬಿದ್ದು ಹೋಗುವ ಘಟ' ಎಂದೇ ಜರಿಯುತ್ತಾರೆ.

'ಮುಕ್ಕಾಗದ ಕುಡಿಕೆ' ಎಂದರೆ ಈಗ ವಾಚಕ ಮಹಾಶಯರಿಗೆ ತುಸು ಸುಳುಹು ಸಿಕ್ಕಿರಬೇಕು. ಆ ಕಾಲದಲ್ಲಿ ಬಾಲ್ಯ ವಿವಾಹ ಸರ್ವೇ ಸಾಮಾನ್ಯವಾಗಿದ್ದವು. ಸ್ವಂತ ನನ್ನ ಅಪ್ಪನ ಅಕ್ಕ – ಆ ಸೋದರತ್ತೆಯದೂ ಹಾಗೇ. ಬಾಲ್ಯ ವಿವಾಹಿತಳಾಗಿದ್ದ ಆಕೆಯ ಗಂಡ, ಈಕೆ ಮೈನೆರೆವ ಮೊದಲೇ ಹಿರೇಬೇನೆಯಿಂದ ಮೃತನಾಗುತ್ತಾನೆ. ಎತ್ತಿನ ಗಾಡಿಯಲ್ಲಿ ಕರೆದೊಯ್ದು ಆತನ ಕುಣಿಯ ಮೇಲೆ ಬಳೆಯೊಡೆದು ಬಂದು, ಮರು ಮದುವೆಯಾಗದೆ ತವರು ಮನೆಯಲ್ಲಿಯೆ ಶಾಶ್ವತವಾಗಿ ನೆಲೆ ನಿಂತು, ಬಾಲ್ಯದಲ್ಲಿಯೇ ವೈಧವ್ಯ ಒಪ್ಪಿಕೊಂಡು, ಆಜೀವ ಬ್ರಹ್ಮಚಾರಿಣಿಯಾಗಿ, ಅಚ್ಯುತ ಕನ್ಯೆಯಾಗೇ ಉಳಿದಿದ್ದಳು ನನ್ನ ಆ ಸೋದರತ್ತೆ!

ನಾನಾದರೊ ಕಾಲೇಜು ಸೇರಿ, ಸಾಹಿತ್ಯ ವಿದ್ಯಾರ್ಥಿಯಾಗಿ, ಕಾರಂತರ ಮೂಕಜ್ಜಿಯನ್ನು ಓದುತ್ತಿರಬೇಕಾದರೆ – ನನಗೆ ನನ್ನ ಮನೆಯ ಜೀವಂತ ದೇವತೆ – ನಮ್ಮೀ ಹನುಮತ್ತೆ ನೆನಪಾಗುತ್ತಿದ್ದಳು. ಎಷ್ಟೋ ಬಾರಿ, ಅರಣ್ಯದಲ್ಲಿ ಅನಿವಾರ್ಯವಾಗಿ ಒಬ್ಬಳೇ ನಡೆದುಕೊಂಡು ಬರುತ್ತಿರುವಾಗ, ಹೊಂಚು ಹಾಕಿ ಕೂತು, ಅನುಸರಿಸುತ್ತ, ಬೆನ್ನು ಬೀಳುತ್ತಿದ್ದ ಪುರುಷ ಮೃಗಗಳ ಕೈಯಿಂದ ಉಪಾಯವಾಗಿ ತಪ್ಪಿಸಿಕೊಂಡು ಬಂದ ಪ್ರಸಂಗಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದಳು. ಪ್ರಪಂಚ ಎಂದರೆ 'ಹೀಗೂ ಉಂಟೆ' ಎಂದುಕೊಳ್ಳುತ್ತಿದ್ದೆವು, ಆಗ. ಇವತ್ತಿನ ನಾಗರಿಕ ಪ್ರಪಂಚದಲ್ಲಿಯೂ ನಮ್ಮ ಒಂಟಿ ಹೆಣ್ಣುಮಕ್ಕಳು ಆ ಒಂದು ವಿಷಯದಲ್ಲಿ ತಮ್ಮನ್ನು ತಾವೇ ರಕ್ಷಿಸಿಕೊಳ್ಳಲು ಏನೆಲ್ಲ ಉಪಾಯಗಳನ್ನು ಹೂಡಿ, ಪಾರಾಗಿ ಬರುತ್ತಿರುವುದನ್ನು ನೋಡಿದರೆ, ಈ ಒಂದು ವಿಷಯದಲ್ಲಿ ಮಾತ್ರ ಮಾನವ ಸ್ವಭಾವಗಳು ಬದಲಾವಣೆ ಕಾಣಲು ಸಾಧ್ಯವಿಲ್ಲವೇ ಎಂಬೆಲ್ಲ ಚಿಂತನೆಗೆ ಹಚ್ಚುತ್ತದೆ.

ತಮ್ಮನ ಸಂಸಾರ, ಅಂದರೆ ನನ್ನಪ್ಪನ ಅಂಗತಿಗೆಟ್ಟ ಬಾಳುವೆಯಿಂದಾಗಿ, ನಮ್ಮ ಹನುಮತ್ತೆ ತಮ್ಮನ ಸಂಸಾರವನ್ನು ಸರಿದೂಗಿಸಲು ಆತನಿಗೆ ಸರಿಸಮನಾಗಿ ಹೆಗಲುಗೊಟ್ಟಿದ್ದಳು, ವಾಹ್! ಆದರೂ, ಕೆಲವೊಮ್ಮೆ ವಿಪರೀತಕಿಟ್ಟುಕೊಂಡುಬಿಡುತ್ತಿತ್ತು. ಯಾವಯಾವುದೋ ಕಾರಣಕ್ಕೆ ಮನೆಯಲ್ಲಿ ರಾದ್ಧಾಂತವಾಗಿ, (ಸಂಸಾರವೆಂದ ಮೇಲೆ ಇದ್ದೇ ಇರುತ್ತವಲ್ಲ) ಅಂಥದೇ ಒಂದು ದಿನ ಬೇಸತ್ತು, ಮನೆಯ ಮಂದಿ ನೋಡನೋಡುತ್ತಿದ್ದಂತೆಯೇ, 'ಇವತ್ತಿಗೆ ಈ ಮನೆಯ ರಿಣ ಮುಗೀತು' ಎಂದು ಉಗ್ಗಡಿಸಿ, ಮನೆಯ ಹೊಸ್ತಿಲಿಗೆ ಹಣೆ ಹಚ್ಚಿ ನಮಸ್ಕರಿಸಿದ, ನಮ್ಮೀ ಸೋದರತ್ತೆ – ಮುಕ್ಕಾಗದ ಕುಡಿಕೆಯಾಗೇ ಉಳಿದ ಮುದುಕಿ ಹನುಮಮ್ಮತ್ತೆ, ಹಳೆ ಸೀರೆಯಿಂದ ಕೈ ಹೊಲಿಗೆ ಹಾಕಿ ಮಾಡಿರುವ ದೇಶೀ ಶಾಲು–ಕುಂಚಿಗೆಯನ್ನು ತಲೆಗೆ ಹೊದ್ದು, ತನ್ನ ಬಿದಿರಿನ ಊರುಗೋಲು ಹಿಡಿದು, ಟಯರಾವುಗೆ ಮೆಟ್ಟಿ ಮನೆ ಬಿಟ್ಟು ಹೋಗೇಬಿಟ್ಟಿದ್ದಳು.

ಆಗಿನ್ನೂ ಪ್ರಾಥಮಿಕ ಶಾಲೆಯ ಹುಡುಗನಾಗಿದ್ದ ನಾನು, ಆಟವಾಡಿ ದಣಿದು, ಸಂಜೆಗತ್ತಲು ಆವರಿಸುವ ಹೊತ್ತಿಗೆ ಮನೆಗೆ ಹೋಗಿ ನೋಡುತ್ತೇನೆ – ಮನೆ ಮಂದಿಯೆಲ್ಲ ತಲೆಯ ಮೇಲೆ ಕೈಹೊತ್ತು ಕುಳಿತಿದ್ದಾರೆ. ಕತ್ತಲಾದರೂ ಬಾರದಿದ್ದುದಕ್ಕೆ ಮುದುಕಿ ಏನಾದರೊಂದು ಅನಾಹುತ ಮಾಡಿಕೊಂಡು ಬಿಟ್ಟಳೇ ಹೇಗೆ ಎಂದು ಎಲ್ಲರೂ ಚಿಂತಾಕ್ರಾಂತರಾಗಿದ್ದರು. ನೆರೆಹೊರೆಯ ಒಂದಿಬ್ಬರು, ಅಪ್ಪ ಮತ್ತು ನಾನು ಮಾತನಾಡಿಕೊಂಡು ಹನುಮತ್ತೆಯನ್ನು ಹುಡುಕಿಕೊಂಡು, ಎಲ್ಲಿ ಯಾವ ಕೆರೆಬಾವಿಯ ಪಾಲಾದಳೋ ಎಂಬ ಅನುಮಾನದ ಧಾವಂತದಲ್ಲಿ, ಒಬ್ಬೊಬ್ಬರೂ ಒಂದೊಂದು ದಿಕ್ಕಿಗೆ ಹುಡುಕಿಕೊಂಡು ಹೊರಟೆವು.

ನನ್ನ ನೆನಪಿನ ಎಳೆಯಲ್ಲಿ, ಆಕೆ ಮೊದಲಿನಿಂದಲೂ ನನ್ನೂರಿನ ರುದ್ರಬಾವಿ ಅಂಚಿನಲ್ಲಿರುವ ಹನುಮಪ್ಪನ ಖಾಸಾ ಭಕ್ತೆ ಎಂಬುದು ನೆನಪಾಗಿ, ಆ ದಿಕ್ಕಿಗೇ ಧಾವಿಸಿದೆ. ಮೂರು ಸಂಜೆಯ ಹೊತ್ತಾಗಿದ್ದರಿಂದಾಗಿ, ಮನೆಗೆ ಹಿಂತಿರುಗುತ್ತಿದ್ದ ದನಕರುಗಳ ಕಾಲಿಂದ ಎದ್ದ ದೂಳು ಮೂಗಿಗೆ ಅಡರುತ್ತಿತ್ತು. ರುದ್ರಬಾವಿ ಅಂಚಿಗೆ ಬಂದು ನಿಂತು ನೋಡುತ್ತೇನೆ. ಅನತಿ ದೂರದಲ್ಲಿಯೇ ಆಕೆಯ ಕುಂಚಿಗೆ, ಕೋಲು, ಟಯರ್ ಆವುಗೆಗಳು ಅಲ್ಲಿರುವುದನ್ನು ನೋಡಿ ಎದೆ ದಸ್ಸಕ್ಕೆಂದಿತು. ಅನಾಹುತ ನೆನೆದು, ಬಗ್ಗಿ ಬಗ್ಗಿ ಬಾವಿಗೆ ಹಣಿಕಿ ನೋಡುತ್ತಿರಬೇಕಾದರೆ, ಆಗಲೇ ಕವಿಯುತ್ತಿದ್ದ ಕತ್ತಲೆಗೆ ಏನೊಂದೂ ಕಾಣದು. ನನ್ನ ತರ್ಕಕ್ಕೆ ಉತ್ತರ ಸಿಕ್ಕದೆ, ಮನಸ್ಸಿನಲ್ಲಿ ಪೇಚಾಡಿಕೊಂಡು ಕೈ ಕೈ ಹಿಸುಕಿಕೊಂಡು, ಬಾರಿ ಬಾರಿಗೆ ಬಗ್ಗಿ ಬಗ್ಗಿ ಬಾವಿಯೊಳಗೆ ಇಣುಕುತ್ತ ನಿಂತವನನ್ನು ನೋಡಿ, ಎತ್ತು ಬಿಟ್ಟುಕೊಂಡು ಹಿಂತಿರುಗುತ್ತಿದ್ದ ರೈತನೊಬ್ಬ ನನ್ನ ಅವಸ್ಥೆ ಕಂಡು ಊಹಿಸಿಕೊಂಡನೇನೋ– 'ಲೇ ಹುಡುಗಾ, ಯಾರನ್ನು ಹುಡುಕತಿ? ಒಳಗ ದೇವರ ಮುಂದ, ಎಣ್ಣೀ ದೀಪದ ಮುಂದ, ಮುದುಕಿ ಒಂದು ಕುಂತೈತಿ ನೋಡು...' ಎಂದು ತಿಳಿಸಿದ್ದ.

ಹುರ್ರಾ ಎಂದು ಅತ್ತ ಓಡಿದೆ. ಸದ್ದಾಗದಂತೆ ಹೋಗಿ, ಬಾಗಿಲ ಮರೆಯಲ್ಲಿ ನಿಂತು ಹಣಿಕಿದೆ. ಸಣ್ಣ ಪ್ರಣತಿಯ ಬೆಳಕಿನಲ್ಲಿ ನಮ್ಮ ಹನುಮತ್ತೆ ಕೂತು, ನಡು ನಡುವೆ ದೀರ್ಘ ಉಸಿರು ಬಿಡುತ್ತಲೇ ದೇವರೊಂದಿಗೆ ಸಂಭಾಷಿಸುತ್ತಿದ್ದಳು. 'ಲೋ ಹನುಮಾ, ನಾನು ಅಸರಂತ ನಿನ್ನ ನಂಬೀನಿ. ನನಗೆ ಯಾಕ ಇಷ್ಟು ತ್ರಾಸು ಕೊಡತೀ ಹೇಳು... ನಾನು ಮುಕ್ಕಾಗದ ಕುಡಕಿ. ದಟ್ಟಿ ಮ್ಯಾಲೆ ಹೋಗಿ ಮೈನೆರಿಯೋಕ ಮೊದಲೇ ಗಂಡನ ಕುಣೀ ಮ್ಯಾಲ ಬಳಿ ಒಡೆದು ಬಂದು ತವರ ಮನಿ ಸೇರಿ, ತಪಾ ತೆಗೆದಾಕಿ ನಾ. ನನ್ನಿಂದ ಏನು ತಪ್ಪಾಗೇತಿ ಅದನಾರು ಹೇಳು. ಇವತ್ತು ಏನಾರ ಒಂದು ಫೈಸಲ್ ಆಗಬೇಕು' ಎಂದು ದೀರ್ಘ ಉಸಿರು ತೆಗೆದುಕೊಂಡಳು. ಥೇಟು, ಆಪ್ತ ಗೆಳೆಯನೊಂದಿಗೆ ಮಾತನಾಡುವ ತೆರದಲ್ಲಿಯೇ, ಅದೇ ಸಲುಗೆಯಲ್ಲಿ ಮಾತನಾಡುತ್ತಿದ್ದಳು.

ಆಕೆಯ ಏಕಾಗ್ರತೆಗೆ ಭಂಗ ಬಾರದಂತೆ, ಮರೆಯಲ್ಲಿ ನಿಂತು ಸದ್ದಾಗದಂತೆ ಆ ಚೋದ್ಯವನ್ನು ಕುತೂಹಲದಿಂದ ನೋಡುತ್ತಿದ್ದೆ. ಹದಿನೈದು ನಿಮಿಷ, ಮತ್ತೆ ಮೌನಕ್ಕೆ ಜಾರಿದಳು. ತನ್ನನ್ನು ತಾನೇ ಸಾವರಿಸಿಕೊಂಡಂತೆ, ನೆಲಕ್ಕೆ ಹಣೆ ಹಚ್ಚಿ ನಮಸ್ಕರಿಸಿ, ನಿಡಿದಾದ ಉಸಿರು ಬಿಟ್ಟು, ಹೊರಗೆ ಬಂದು, ನನ್ನ ಕಡೆ ನೋಡಿ, 'ನೀ ಯಾವಾಗ ಬಂದ್ಯಲೋ' ಎಂದು ಮುಗುಳುನಗೆ ಬೀರಿ, 'ಆ ಮನಿ ರಿಣ ಮುಗಿದಿಲ್ಲ, ವಾಪಸ್ಸು ಹೋಗು ಅಂದ ಅವ ಕರಿ ಹನುಮ, ನಡಿ' ಎಂದಳು ಹೊಸ ಮನುಷ್ಯಳಾದಂತೆ, ಪೊರೆಬಿಟ್ಟ ಹಾವಂತೆ. ಸರಸರ ಎಂದು ನಡೆದು, ಬಾವಿಯಂಚಿಗೆ ಬಿಟ್ಟಿದ್ದ ತನ್ನ ಟಯರಾವುಗೆ ಮೆಟ್ಟಿ, ಬಡಿಗೆ, ಕುಂಚಿಗೆ ಹಿಡಿದು ಮರಳಿ ಮನೆಯತ್ತ ನಡೆದಿದ್ದಳು. ನಾನೋ, ಸಾಕು ನಾಯಿಯಂತೆ ಸುಮ್ಮನೇ ಹಿಂಬಾಲಿಸಿದ್ದೆ, ಕಳೆದ ಮಾಲು ಸಿಕ್ಕ ಖುಷಿಯಲ್ಲಿ ಹೊರಟೆ, ಪ್ರಪಂಚವನ್ನೇ ಗೆದ್ದಂತೆ.

ಮನೆಯಂಗಳ ತಲುಪುತ್ತಿದ್ದಂತೆ, ಅರ್ಧ ಊರಿನ ಜನರೇ ಅಲ್ಲಿ ಸೇರಿದ್ದರು, ಆಗಲೇ ಆಗಿರಬಹುದಾದ ಅನಾಹುತವನ್ನು ನೆನೆದು. ಮುಂದೆ ಮುಂದೆ ಹನುಮತ್ತೆ, ಹಿಂದೆ ನಾನು. ಅಂಗಳ ಪ್ರವೇಶ ಮಾಡುತ್ತಿದ್ದಂತೆ ಎಲ್ಲರ ಮುಖದಲ್ಲಿ ಸಂತೋಷ ಅರಳಿತ್ತು. ಒಣಗಿದ್ದ ನಾಲಿಗೆಗಳು ಸುಧಾರಿಸಿಕೊಂಡವು. ನಮ್ಮನ್ನು ನೋಡಿ, ಹೋದ ಜೀವ ಬಂದಂತಾಗಿ ನೆರೆದವರ ಮುಖದಲ್ಲಿ ಮತ್ತೆ ಹರ್ಷೋದ್ಗಾರ ಚಿಮ್ಮಿದ್ದವು. ಆಗಬಹುದಾಗಿದ್ದ ಗಂಡಾಂತರವೊಂದು ಹೀಗೆ ಸುಲಭವಾಗಿ ತಪ್ಪಿ ಹೋದದ್ದಕ್ಕೆ, ನಾನೇ ಅತ್ತೆಯನ್ನು ಸಾವಿನ ದವಡೆಯಿಂದ ಬಿಡಿಸಿಕೊಂಡು ತಂದೆನೇನೋ ಎಂಬಂತೆ, ಆಕೆಯ ಬೆನ್ನ ಹಿಂದೆ ಗನ್‌ಮ್ಯಾನ್‌ನಂತೆ ಹಿಂಬಾಲಿಸಿಕೊಂಡು ಬಂದ ನನಗೂ ಸಾಕಷ್ಟು ಗೌರವ ನಿರಾಯಾಸವಾಗಿ ದಕ್ಕಿತ್ತು. ಆ ದಿನದ, ಆ ಗಳಿಗೆ ಇನ್ನೂ ನನ್ನ ಮನದಲ್ಲಿ ಹಚ್ಚ ಹಸಿರಾಗಿ ಉಳಿದಿದೆ.

ಬದುಕನ್ನು ಸಹನೀಯವಾಗಿಸಿಕೊಳ್ಳಲು 'ಬಾಳಿಗೊಂದು ನಂಬಿಕೆ' ಬೇಕೇ ಬೇಕೇನೋ ಎಂಬ ಪ್ರಶ್ನೆ ನನ್ನೊಳಗೆ ಇನ್ನೂ ಪ್ರಶ್ನೆಯಾಗೇ ಉಳಿದಿದೆ. ಆದರೆ, ನನ್ನ ಪಾಲಿಗೆ ಆ ನನ್ನ ಅನ್‌ಪಡ್ ಸೋದರತ್ತೆ – ಮುಕ್ಕಾಗದ ಕುಡಿಕೆ ನನ್ನ ಎದೆಯಲ್ಲಿ ಅಸರಂತ ಒಂದು ಬೀಜ ಬಿತ್ತಿದ್ದಳು. 'ನೋಡಪ್ಪಾ, ಇದ ನೆನಪಿಟ್ಟಗ, ಪರಪಂಚದಾಗ ಹೆಂಗ್ ನೆಡಕಂಡೀ, ಹಂಗ ಪಡಕಂಡಿ' ಎಂದು. ವಾಹ್! ಎಲ್ಲ ಕಾಲಕ್ಕೂ ಅದು ಸಲ್ಲುವಂಥ ಮಾತೇ ಸೈ. ಇವತ್ತಿನ ಜನರೇಶನ್‌ಗೆ 'ಮುಕ್ಕಾಗದ ಕುಡಿಕೆ' ಅಸಂಗತವಾಗಿ ಕಾಣಿಸಬಹುದು. 'ಹೀಗೂ ಉಂಟೆ?' ಎಂದು ಹುಬ್ಬೇರಿಸಲೂ ಬಹುದು, ಆದರಿದು ಸೂರ್ಯನಷ್ಟೇ ಸತ್ಯ.